## ಮಾಧ್ಯಮಗಳ ಪಾತ್ರ

ಬೂಸಾ ಪ್ರಕರಣವು ರಾಷ್ಟ್ರಮಟ್ಟದ ಸುದ್ದಿಯಾಯಿತು. ಖುಷವಂತ ಸಿಂಗರು 'ಇಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯಲ್ಲಿ 'ಬಸವಲಿಂಗಪ್ಪನವರು ಕೇವಲ ಕನ್ನಡ ಸಾಹಿತ್ಯದ ಬಗ್ಗೆ ಹೇಳಿದ್ದಾರೆ. ಭಾರತದ ಭಾಷೆಗಳಲ್ಲಿ ಇರುವ ಬಹುತೇಕ ಸಾಹಿತ್ಯ ಬೂಸಾ ಎಂದು ಹೇಳಬೇಕಾಗಿತ್ತು' ಎಂದು ಸಂಪಾದಕೀಯ ಬರೆದರು. ಆದರೆ, ಕರ್ನಾಟಕದ ಬಹುತೇಕ ಪತ್ರಿಕೆಗಳು, ಮೇಲ್ಜಾತಿಗೆ ಸೇರಿದ ಸಂಪ್ರದಾಯವಾದಿ ಮನೋಭಾವದ ಪತ್ರಕರ್ತರಿಂದ ತುಂಬಿದ್ದವು. ಅವು ಬಿಬಿಯವರನ್ನು ಖಳನಾಯಕನೆಂಬಂತೆ ಬಿಂಬಿಸಿದವು. 'ಕನ್ನಡ ಸಾಹಿತ್ಯದಲ್ಲಿ ಬೂಸಾ ಅಂಶವೂ ಇದೆ' ಎಂಬ ಸಾಪೇಕ್ಷ ಹೇಳಿಕೆಯನ್ನು, ಕನ್ನಡದಲ್ಲಿರುವುದೆಲ್ಲಾ ಬೂಸಾ ಎಂಬ ಆತ್ಯಂತಿಕ ಹೇಳಿಕೆಯನ್ನಾಗಿಸಿದವು. ವಿವಾದಗಳಲ್ಲಿ ಮೂಲ ಹೇಳಿಕೆ ತಬ್ಬಲಿಯಾಗಿ, ಅದಕ್ಕೆ ಹುಟ್ಟುವ ವ್ಯಾಖ್ಯಾನಗಳೇ ಅಖೈರು ಸತ್ಯಗಳಾಗುತ್ತವೆ.

ಎಂ.ಎಂ. ಕಲಬುರ್ಗಿಯವರು ಬಲಿಯಾಗಿದ್ದು ಮಾಧ್ಯಮಗಳ ಈ ವ್ಯಾಖ್ಯಾನ ರಾಜಕಾರಣಕ್ಕೇ. ಪತ್ರಿಕೆಗಳು ಬಿಬಿಯವರನ್ನು ಅಧಿಕಾರದಿಂದ ಕೆಳಗಿಳಿಸಿ ತಮ್ಮ ಯುದ್ಧಕ್ಕೆ ತಾರ್ಕಿಕ ಕೊನೆ ಮುಟ್ಟಿಸಿದವು. ಅದೊಂದು ಯೋಜಿತ ಫಿತೂರಿಯಾಗಿತ್ತು. 'ನಿಮ್ಮ ಮಂತ್ರಿ ಪದವಿ ಹೋಗಲು ಕಾರಣವೇನು?' ಎಂಬ ಪ್ರಶ್ನೆಗೆ ಬಿಬಿ ಕೊಟ್ಟ ಉತ್ತರದಲ್ಲಿ ಇದರ ಸೂಚನೆಗಳಿವೆ:

'ಪತ್ರಿಕೆಗಳು ಮತ್ತು ಪಠ್ಯಪುಸ್ತಕಗಳಲ್ಲಿನ ವಿಷಯ ಗಮನಿಸಿ ಆ ಮಾತನ್ನು ಸಾಂದರ್ಭಿಕವಾಗಿ ನನ್ನ ಭಾಷಣದ ಹಿನ್ನೆಲೆಯೊಂದಿಗೆ ಹೇಳಿದ್ದೆ. ನನಗೆ ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಅಭಿಮಾನವಿಲ್ಲವೆಂತಲ್ಲ. ಕರ್ನಾಟಕ ಏಕೀಕರಣಕ್ಕಾಗಿ ಹಾಗೂ ಕನ್ನಡ ಭಾಷೆಯ ಉನ್ನತಿಗಾಗಿ ದುಡಿದಿದ್ದೆ. ಅಲ್ಲದೆ ಮಂತ್ರಿಯಾಗಿ ಕನ್ನಡದ ಸೇವೆಯನ್ನೂ ಮಾಡಿದ ನನ್ನಿಂದ ಇಂಥ ಅವಹೇಳನವನ್ನು ನಿರೀಕ್ಷಿಸುವುದು ಸಾಧ್ಯವೇ? ಇದೆಲ್ಲ ನಡೆದದ್ದು ಯಾವುದೊ ಕುತಂತ್ರದ ಹಿನ್ನೆಲೆಯಲ್ಲಿ. ಮೈಸೂರಲ್ಲಿ ನಾನು ಭಾಷಣ ಮಾಡಿದ್ದು ನವೆಂಬರ್ 18. ಆದರೆ, ಹತ್ತು ದಿವಸ ಬಿಟ್ಟು ಪತ್ರಿಕೆಯಲ್ಲಿ 'ಕನ್ನಡ ಸಾಹಿತ್ಯ ಬೂಸಾ' ಎಂಬ ಹೇಳಿಕೆ ಬಂತು. ಇದು ಹೇಗೆಂದು ವಿಚಾರಿಸಿಕೊಂಡಾಗ, ನನ್ನ ಸ್ವಂತ ಪಕ್ಷದವರೇ ನನ್ನ ಮೇಲೆ ಈ ಅಪರಾಧದ ಹೊಣೆ ಹೊರಿಸಿದ್ದರೆಂದು ಭಾವನೆ ಬಂತು... ಕ್ಯಾಬಿನೆಟ್‌ನಲ್ಲಿ ನಾನೊಬ್ಬ ಇಕ್ಕುಳದಂತೆ ಇರುವೆನೆಂದು ತಿಳಿದ ಅವರು, ನಾನು ಹೋದರೆ ತಮ್ಮ ಕೆಲಸ ಸುಗಮವಾಗುವುದೆಂದು ಭಾವಿಸಿರಬೇಕು.'

ಬೂಸಾ ಪ್ರಕರಣವು ಹಿಂದುಳಿದ ಸಮುದಾಯಗಳಿಗೂ ಪ್ರಗತಿಪರ ಚಿಂತಕರಿಗೂ ಸಂಪ್ರದಾಯವಾದಿಗಳ ಕೈಯಲ್ಲಿರುವ ಮಾಧ್ಯಮಗಳು ತಮ್ಮ ಪ್ರಧಾನ ಹಗೆಯೆಂಬ ಜ್ಞಾನೋದಯವನ್ನು ಮಾಡಿಸಿತು. ಸಮಾಜದ ಬದಲಾವಣೆಗೆ ಸಾಹಿತ್ಯ ರಚನೆ, ಚಳವಳಿ



ಬಿ. ಆರ್. ಅಂಬೇಡ್ಕರ್